# 'ಡಾರ್ಲಿಂಗ್' ಕೃಷ್ಣನ ಮಾರಾಮಾರಿ

'ಕೋಟಿ ನಿರ್ಮಾಪಕ' ಎಂದೇ ಗಾಂಧಿನಗರದಲ್ಲಿ ಪ್ರಸಿದ್ಧರಾದ ರಾಮು ಅವರ ಹೊಸ ಚಿತ್ರ 'ಮುಂಬಯಿ' ತೆರೆಕಾಣಲು ಸಿದ್ಧತೆ ನಡೆಸಿದೆ. ಸಂಕ್ರಾಂತಿಯ ಆಸುಪಾಸಿನಲ್ಲಿ ಚಿತ್ರವನ್ನು ತೆರೆಕಾಣಿಸುವುದು ನಿರ್ಮಾಪಕರ ಉದ್ದೇಶ.

ಎಸ್.ಆರ್. ರಮೇಶ ನಿರ್ದೇಶನದ ಈ ಚಿತ್ರ ಮುಂಬಯಿ ಮಹಾನಗರದಲ್ಲಿ ಐವತ್ತು ದಿನಗಳ ಕಾಲ ಚಿತ್ರೀಕರಣ ನಡೆಸಿದೆ. 'ಡಾರ್ಲಿಂಗ್' ಕೃಷ್ಣ ಹಾಗೂ ತೇಜು ಚಿತ್ರದ ಮುಖ್ಯ ಪಾತ್ರಗಳಲ್ಲಿದ್ದಾರೆ. ರಂಗಾಯಣ ರಘು ಚಿತ್ರದ ಮತ್ತೊಂದು ಮುಖ್ಯ ಪಾತ್ರದಲ್ಲಿ ನಟಿಸಿದ್ದಾರೆ. ಶ್ರೀಧರ್ ಸಂಭ್ರಮ್ ಸಂಗೀತ ಸಂಯೋಜನೆ ಹಾಗೂ ರಮೇಶ್ ಅವರ ಛಾಯಾಗ್ರಹಣ ಚಿತ್ರಕ್ಕಿದೆ. ಕಳೆದ ವಾರ 'ಮುಂಬಯಿ' ಚಿತ್ರದ ಟ್ರೈಲರ್ ಬಿಡುಗಡೆಯಾಗಿದೆ.

ರಾಮು ಅವರ ಸಿನಿಮಾಗಳು ಅದ್ದೂರಿ ನಿರ್ಮಾಣಕ್ಕೆ ಹೆಸರುವಾಸಿ. 'ಮುಂಬಯಿ' ಕೂಡ ತನ್ನ ಅದ್ದೂರಿತನ ಹಾಗೂ ಮೇಕಿಂಗ್‌ನಿಂದಾಗಿ ಸುದ್ದಿ ಮಾಡಲಿದೆ ಎನ್ನುವುದು ಚಿತ್ರತಂಡದ ವಿಶ್ವಾಸ. ಥ್ರಿಲ್ಲರ್ ಮಂಜು ಹಾಗೂ ಡಿಫರೆಂಟ್ ಡ್ಯಾನಿ ಸಂಯೋಜಿಸಿರುವ ಸಾಹಸ ದೃಶ್ಯಗಳು ಚಿತ್ರದ ಹೈಲೈಟ್‌ಗಳಾಗಿವೆ. ಇದರ ಜೊತೆಗೆ ಹಾಡುಗಳು ಕೂಡ ವರ್ಣರಂಜಿತವಾಗಿ ಮೂಡಿಬಂದಿವೆಯಂತೆ.





# 'ಕಾಮನ್ ಮ್ಯಾನ್' ಶಿವಣ್ಣ!

2017ರ ಆರಂಭಿಕ ಚಿತ್ರಗಳಲ್ಲೊಂದಾಗಿ ಶಿವರಾಜ್‌ಕುಮಾರ್ ನಟನೆಯ 'ಶ್ರೀಕಂಠ' ಚಿತ್ರ ತೆರೆಕಾಣುತ್ತಿದೆ (ಜ. 6). 'ಸಂತೆಯಲ್ಲಿ ನಿಂತ ಕಬೀರ' ಸಿನಿಮಾದ ನಂತರ ತೆರೆಕಾಣುತ್ತಿರುವ ಈ ಚಿತ್ರ ಶಿವಣ್ಣನ ಅಭಿಮಾನಿಗಳ ಪಾಲಿಗೆ ಹೊಸ ವರ್ಷದ ಉಡುಗೊರೆ.

ಕಳೆದ ಡಿಸೆಂಬರ್‌ನಲ್ಲೇ ತೆರೆಕಾಣಬೇಕಿದ್ದ ಈ ಸಿನಿಮಾ 'ಕರೆನ್ಸಿ ಕ್ರೈಸಿಸ್'ನಿಂದಾಗಿ ಕೊಂಚ ತಡವಾಗಿ ಪ್ರೇಕ್ಷಕರ ಎದುರು ಬರುತ್ತಿದೆ. 'ಶಿಶಿರ'ದಂಥ ವಿಭಿನ್ನ ಚಿತ್ರವನ್ನು ರೂಪಿಸಿದ್ದ ಮಂಜು ಸ್ವರಾಜ್ ಈ ಚಿತ್ರದ ನಿರ್ದೇಶಕರು. ಈ ಸಿನಿಮಾದ ಮೂಲಕ ತಮ್ಮ ವೃತ್ತಿಜೀವನದ ತಿರುವಿನ ನಿರೀಕ್ಷೆಯಲ್ಲಿರುವ ಮಂಜು, 'ಶ್ರೀಕಂಠ' ಚಿತ್ರದ ಬಗ್ಗೆ ಅಪಾರ ನಿರೀಕ್ಷೆ ಹೊಂದಿದ್ದಾರೆ. ನಾಯಕನ ಇಮೇಜ್‌ಗೆ ತಕ್ಕಂತೆ ಕಥೆಯಿದ್ದರೂ, ಅತಿರೇಕಗಳಿಲ್ಲದ ಸರಳ ಹಾಗೂ ಸುಂದರ ಚಿತ್ರ ಎನ್ನುವ ಮಾತುಗಳು 'ಶ್ರೀಕಂಠ'ನ ಬಗ್ಗೆ ಕೇಳಿಬರುತ್ತಿವೆ. ಇದಕ್ಕೆ ತಕ್ಕನಾಗಿ ಶಿವಣ್ಣ ಸಾಮಾಜಿಕ ಸಂದೇಶ ನೀಡುವ 'ಕಾಮನ್ ಮ್ಯಾನ್' ಪಾತ್ರದಲ್ಲಿ ನಟಿಸಿದ್ದಾರಂತೆ. ಪ್ರಯೋಗಶೀಲ ಪಾತ್ರಗಳ ಹಂಬಲದ ಅವರಿಗೆ ರಂಜನೆಯ ಜೊತೆಗೆ ಸಂದೇಶವನ್ನೂ ಒಳಗೊಂಡಿರುವ ಪಾತ್ರ ಖುಷಿಕೊಟ್ಟಿದೆ.

ಮಲಯಾಳಿ ಹುಡುಗಿ ಚಾಂದಿನಿ ಶ್ರೀಧರನ್ 'ಶ್ರೀಕಂಠ' ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಬಂದಿದ್ದಾರೆ. ಮೊದಲ ಚಿತ್ರದಲ್ಲೇ ತಾರಾ ವರ್ಚಸ್ಸಿನ ನಾಯಕನ ಜೊತೆ ಕೆಲಸ ಮಾಡಿದ ಪುಲಕ ಅವರದು. ಈ ಚಿತ್ರದ ಶೂಟಿಂಗ್ ಅವರಿಗೆ ಅಭಿನಯದ ಕಮ್ಮಟದಂತೆಯೂ ಕಾಣಿಸಿದೆ. ಅಜನೀಶ್ ಲೋಕನಾಥ್ ಸಂಗೀತ ಚಿತ್ರಕ್ಕಿದೆ.